ಸುರಕ್ಷಿತವಲ್ಲ. ಪ್ರತಿಯೊಂದು ಮನೆಯಲ್ಲೂ ಬ್ರೆಕ್‌ಫಾಸ್ಟ್ ಟೇಬಲುಗಳ ಬಳಿಯೇ ಸುದ್ದಿ ಸ್ಫೋಟಗೊಳ್ಳುತ್ತದೆ. ನಗರಗಳಲ್ಲಿ ಭಯಭೀತಿಯ ವಾತಾವರಣ. ನಾವು ಬೆಳಗಿನ ಹೊತ್ತು ಏನಾಗಬಹುದೋ ಎಂದು – ಸ್ಫೋಟವೋ ಅದಕ್ಕಿಂತ ಮಾರಕವಾದದ್ದು ಇನ್ನೇನೋ ಎಂದು – ಭಯದಿಂದ ಪತ್ರಿಕೆಗಳನ್ನು ತೆರೆಯುತ್ತೇವೆ; ಮರುಕ್ಷಣ ಅದು ಪತ್ರಿಕೆಯ ಪುಟಗಳಿಂದ ಮೇಲೆದ್ದು ಮನೆಯ ಛಾವಣಿಯನ್ನು ಛಿದ್ರಗೊಳಿಸುತ್ತದೆ. ಚೀನಾದ ಸುದ್ದಿ – ಇದ್ದಕ್ಕಿದ್ದಂತೆ ಕುಳ್ಳುಕುಳ್ಳಾದ ಹಳದಿ ಸೈನಿಕರಿಂದ ತುಂಬಿಹೋಗುವ ಕೋಣೆ; ಅವರು ಪಂಜರಗಳಲ್ಲಿರುವ ಗಿಳಿಗಳತ್ತ ಗುರಿಯಿಡುತ್ತಾರೆ. ಬ್ರೆಕ್‌ಫಾಸ್ಟ್ ಟೇಬಲಿನ ಮೇಲೆ ಸೈನಿಕ ಪಡೆಗಳು ತಮ್ಮ ಗುಂಡುಗಳನ್ನು ಬೆಳಗಿನ ತಿಂಡಿಯಲ್ಲಿ ಮುಳುಗಿಸುವ ಸುದ್ದಿ ತರುತ್ತದೆ ಯುದ್ಧ. ನೋಟು ನಾಣ್ಯಗಳಿಲ್ಲದ ಘೋರ ಪರಿಸ್ಥಿತಿಯೊಂದು ಬಡಾವಣೆಯ ಅಡುಗೆಮನೆಗಳ ಆಮ್ಲೆಟ್, ಮಾರ್ಮಲೇಡುಗಳ ನಡುವೆ ಖಣಖಣವೆನ್ನುತ್ತದೆ. ಮತ್ತೆ ಈ ದಿನಗಳಲ್ಲಿ ಪ್ರತಿಯೊಂದು ಮನೆಯ ಲಾನ್‌ಗಳಲ್ಲಿ ಚಂದ್ರನ ಮೇಲೆ ನಡೆಯುತ್ತಿರುವ ಗಗನಯಾತ್ರಿಗಳನ್ನು ನೋಡಬಹುದು...

ಏನು ಓದಬಹುದೋ ಎಂಬ ಭಯದಿಂದ ನಮ್ಮಲ್ಲಿ ಯಾರೂ ಪತ್ರಿಕೆಗಳನ್ನು ಕೊಂಡುಕೊಳ್ಳುವುದಿಲ್ಲ. ಸುದ್ದಿ ಓದುವುದರಿಂದ ಅಪಾಯವೇನೂ ಇಲ್ಲವೆ ಎಂದು ನಾವು ಪ್ರತಿದಿನವೂ ಪರಸ್ಪರ ಕೇಳಿಕೊಳ್ಳುತ್ತೇವೆ. ಆದರೆ ಯಾರಿಗೂ ಉತ್ತರ ಗೊತ್ತಿಲ್ಲ; ಗೊತ್ತಾಗುವ ಮಾರ್ಗವೂ ಇಲ್ಲ. ಪತ್ರಿಕೆಯನ್ನು ಕೊಂಡು ತಾಜಾ ಸುದ್ದಿಯನ್ನು ಓದುವುದರ ಮೂಲಕವಷ್ಟೇ ನಮಗೆ ಗೊತ್ತಾಗಬಹುದು...

# ಖಾಲಿ ಪುಸ್ತಕ

ಮೂಲ: ರಸೆಲ್ ಎಡ್‌ಸನ್ (ಅಮೆರಿಕ/ಇಂಗ್ಲಿಷ್)

ಆ ಪುಸ್ತಕ ಖಾಲಿಯಾಗಿತ್ತು. ಅದರ ಶಬ್ದಗಳೆಲ್ಲ ಬಿದ್ದುಹೋಗಿದ್ದವು.

ಪುಸ್ತಕ ಖಾಲಿ ಎಂದ ಅವಳ ಗಂಡ.

ನಾನು ಈ ಕ್ಷಣ ತಲುಪಿಬಿಡಬೇಕು ಅಂತ ಬರುತ್ತಿರುವಾಗ ಒಂದು ವಿಚಿತ್ರ ಸಂಗತಿ ನಡೆಯಿತು, ಗೊತ್ತಾ? ಅಕ್ಷರಗಳೆಲ್ಲ ಬಿದ್ದುಬಿಡಲಿ ಅಂತ ಪುಸ್ತಕವನ್ನು ಅಲ್ಲಾಡಿಸುತ್ತಿದ್ದೆ. ಇದ್ದಕ್ಕಿದ್ದಂತೆ ಎಲ್ಲ ಶಬ್ದಗಳು, ವಿರಾಮ ಚಿಹ್ನೆಗಳು ಕೂಡ, ಬಿದ್ದುಹೋದವು ಎಂದು ಹೇಳಿದಳು ಅವನ ಹೆಂಡತಿ.

ಶಬ್ದಗಳನ್ನು ಏನು ಮಾಡಿದೆ ಎಂದು ಕೇಳಿದ ಅವಳ ಗಂಡ.

ಅವುಗಳನ್ನು ಪ್ಯಾಕ್ ಮಾಡಿ ಒಂದು ಕಾಲ್ಪನಿಕ ವಿಳಾಸಕ್ಕೆ ಕಳಿಸಿಬಿಟ್ಟೆ ಎಂದಳು ಅವಳು.

ಆದರೆ ಅಲ್ಲಿ ಯಾರೂ ಇರೋಲ್ಲ ಅಂತ ಗೊತ್ತಿಲ್ಲವಾ? ಸುಮ್ಮನೆ ಕಲ್ಪಿಸಿಕೊಂಡ ವಿಳಾಸದಲ್ಲಿ ಯಾರು ಇರುತ್ತಾರೆ ಹೇಳು. ಕೊನೆ ಪಕ್ಷ ಒಂದು ವಿಳಾಸ ಒದಗಿಸೋ ಅಷ್ಟು ವಾಸ್ತವ ಕೂಡ ಅಲ್ಲಿ ಇರೋಲ್ಲ ಎಂದ ಅವನು.

ಅದಕ್ಕೇ ನಾನಲ್ಲಿಗೆ ಕಳಿಸಿದ್ದು. ಚಲ್ಲಾಪಿಲ್ಲಿಯಾಗಿರೋ ಮಾತುಗಳೆಲ್ಲ ವದಂತಿಗಳಾಗಿ, ಅಸೂಯೆ ಹುಟ್ಟಿಸುವ ಗಾಸಿಪ್ಪುಗಳಾಗಿ ಕೂಡಿಕೊಳ್ಳಬಹುದು ಅಂತ.

ಈಗ ಈ ಖಾಲಿ ಪುಟಗಳು ಕೂಡ ವದಂತಿಗಳಿಗೋ ಗಾಸಿಪ್ಪುಗಳಿಗೋ ಆಹ್ವಾನ ಕೊಡುವುದಿಲ್ಲ